ಅ) ಹೌದು.

ಆ) ಬೀದರ್ ಜಿಲ್ಲೆಯ ಕಾರಂಜಾ ಜಲಾಶಯದ ಬಳಿ ಹಾಗೂ ಮೈಸೂರು ಜಿಲ್ಲೆಯ ನುಗು ಬಳಿ ಮೀನು ಮರಿ ಉತ್ಪಾದನಾ ಕೇಂದ್ರಗಳ ನಿರ್ಮಾಣ ಹಾಗೂ ಉನ್ನತೀಕರಣಕ್ಕಾಗಿ ರೂ. 147.00 ಲಕ್ಷ ಅನುದಾನವನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯಲ್ಲಿ ಠೇವಣಿ ಇಡಲಾಗಿದ್ದು. ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಕಾಮಗಾರಿಗಳ ಪ್ರಗತಿಯನ್ನಾಧರಿಸಿ ವೆಚ್ಚ ಮಾಡಲಾಗುವುದು.

ಇ) ಹೌದು.

ಈ) ಈ ಕಾರ್ಯಾಕ್ಕಾಗಿ ರೂ. 47.00 ಲಕ್ಷವನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ ನಿಯಮಿತ ಸಂಸ್ಥೆಯಲ್ಲಿ ಠೇವಣಿ ಇರಿಸಲಾಗಿದ್ದು, ಕೊಳಗಳ ನಿರ್ಮಾಣದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.

ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳು

252 (655) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕು ಮತ್ತು ರಾಜ್ಯದ ಎಲ್ಲಾ ಜಿಲ್ಲೆಗಳ ಡಿ.ಸಿ.ಸಿ. ಬ್ಯಾಂಕುಗಳು ಈಗ ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳನ್ನು ಒಪ್ಪಿಕೊಂಡಿರುವುದು ನಿಜವಲ್ಲವೇ ? ಇದರಿಂದ ಆಡಳಿತಾತ್ಮಕ ಹಾಗೂ ನೇಮಕಾತಿಯ ವಿಷಯದಲ್ಲಿ ಈ ಬ್ಯಾಂಕುಗಳಿಗೆ ಸದರಿ ಶಿಫಾರಸ್ಸಿನನ್ವಯ ಯಾವ ಯಾವ ಅನುಕೂಲಗಳಾಗಿವೆ ; (ಪೂರ್ಣ ವಿವರಗಳನ್ನು ಒದಗಿಸುವುದು)

ಆ) ಹಾಗಿದ್ದಲ್ಲಿ, ಈ ಬ್ಯಾಂಕುಗಳ ಆಡಳಿತ ಮಂಡಳಿ ನಿರ್ಣಯದ ಅನ್ವಯ ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ನಬಾರ್ಡ್ ನಿಯಮ ಮತ್ತು ಮಾರ್ಗಸೂಚಿಗಳನ್ನು ಪಾಲಿಸುವ ಮೂಲಕ ಐ.ಎ.ಎಸ್. ಮತ್ತು ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಹೊರತುಪಡಿಸಿ ಬ್ಯಾಂಕಿಗೆ ಅಗತ್ಯವಿರುವ ವ್ಯವಸ್ಥಾಪಕ ನಿರ್ದೇಶಕರನ್ನು ತಾವೇ ನೇಮಿಸಿಕೊಳ್ಳಲು ಅವಕಾಶವಿರುವುದು ನಿಜವಲ್ಲವೇ ;

ಇ) ಹಾಗಿದ್ದಲ್ಲಿ, ಅಪೆಕ್ಸ್ ಬ್ಯಾಂಕಿಗೂ ಈ ನಿಯಮ ಅನ್ವಯವಾಗುವುದೇ ; ಅಪೆಕ್ಸ್ ಬ್ಯಾಂಕು ಈ ವಿಷಯದಲ್ಲಿ ಇಲ್ಲಿಯವರೆವಿಗೆ ಯಾವ ಕ್ರಮ ಕೈಗೊಂಡಿದೆ ;

ಈ) ಈ ವಿಷಯದಲ್ಲಿ ಇಲ್ಲಿಯವರೆವಿಗೂ ಯಾವ ಯಾವ ಬ್ಯಾಂಕುಗಳು ವ್ಯವಸ್ಥಾಪಕ ನಿರ್ದೇಶಕರುಗಳನ್ನು ನೇಮಕ ಮಾಡಿಕೊಂಡಿದೆ ; (ವಿವರ ನೀಡುವುದು) ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ಹೌದು. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಅಪೆಕ್ಸ್ ಬ್ಯಾಂಕು ಹಣಕಾಸು ಮತ್ತು ಅಂತರಿಕ ಆಡಳಿತವನ್ನು ನಿರ್ಧರಿಸಲು ಸ್ವಾತಂತ್ರ್ಯವನ್ನು ಹೊಂದಿರುತ್ತವೆ. ಅವು ಯಾವುವೆಂದರೆ:

1. ಠೇವಣಿಗಳು ಮತ್ತು ಸಾಲಗಳ ಮೇಲಿನ ಬಡ್ಡಿ ದರಗಳು:

   ರಾಜ್ಯ ಸಹಕಾರ ಬ್ಯಾಂಕಿನ ಮತ್ತು ಕೇಂದ್ರ ಸಹಕಾರ ಬ್ಯಾಂಕಿನ ಸಂದರ್ಭದಲ್ಲಿ, ಬಡ್ಡಿಯ ದರಗಳು ರಿಸರ್ವ್ ಬ್ಯಾಂಕ್ ಹೊರಡಿಸಿದ ಮಾರ್ಗದರ್ಶಿಕೆಗಳಿಗೆ ಅನುಗುಣವಾಗಿರತಕ್ಕದ್ದು.

2. ಸಾಲ ಪಡೆದುಕೊಳ್ಳುವುದು, ಹಣ ಹೂಡಿಕೆ, ತನ್ನ ಹೆಚ್ಚುವರಿ ನಿಧಿಯನ್ನು ಠೇವಣಿ ಇಡುವುದು, ಸಾಲ ನೀಡಿಕೆ ನೀತಿಗಳು

(ವೈಯಕ್ತಿಕ ಸಾಲಗಳೂ ಒಳಗೊಂಡಂತೆ) ಮತ್ತು ಇತರ ವ್ಯವಹಾರ ನೀತಿಗಳು:

3. ಸಂಘದ ವ್ಯವಹಾರದ ಅಗತ್ಯತೆಗಳಿಗನುಸಾರ ನೇಮಕಾತಿ, ಬಡ್ತಿ, ಸಿಬ್ಬಂದಿ ವ್ಯವಸ್ಥೆ, ತರಬೇತಿ, ಸ್ಥಳ ನಿಯುಕ್ತಿ ಮತ್ತು ಸಿಬ್ಬಂದಿಗೆ ಹಾನಿ ಪರಿಹಾರಕ್ಕೆ ಸಂಬಂಧಪಟ್ಟ ವಿಷಯಗಳೂ ಸೇರಿದಂತೆ ಸಿಬ್ಬಂದಿ ನೀತಿಗಳು:

4. ಆಂತರಿಕ ತಪಾಸಣೆಗಳು ಮತ್ತು ನಿಯಂತ್ರಣ ವ್ಯವಸ್ಥೆ, ಲೆಕ್ಕಪರಿಶೋಧಕರ ನೇಮಕ, ಲೆಕ್ಕಪರಿಶೋಧನೆಗಾಗಿ ಪರಿಹಾರ ಮತ್ತು ಇತರ ಆಂತರಿಕ ಆಡಳಿತ ವಿಷಯಗಳು:

5. ಸಂಘದ ಮತ್ತು ಅದರ ಸದಸ್ಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಭಾರತದ ರಿಸರ್ವ್ ಬ್ಯಾಂಕಿನಿಂದ ನಿಯಂತ್ರಿಸಲ್ಪಡುವ ಯಾವುದೇ ಹಣಕಾಸು ಸಂಸ್ಥೆಯಿಂದ ಸಾಲ ಪಡೆದುಕೊಳ್ಳುವುದು.

ಆ) ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ನಬಾರ್ಡ್ ನಿಗದಿಪಡಿಸಿರುವ ಮಾನದಂಡಗಳನ್ವಯ ಅಪೆಕ್ಸ್ ಬ್ಯಾಂಕು ಮತ್ತು ಜಿಲ್ಲಾ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ನಿಗದಿಪಡಿಸಿರುವ ಅರ್ಹತೆಯನ್ನು ಭಾರತ ಆಡಳಿತ ಸೇವೆ ಅಧಿಕಾರಿ ಅಥವಾ ಸಹಕಾರ ಇಲಾಖಾಧಿಕಾರಿಗಳು ಹೊಂದಿದ್ದಲ್ಲಿ ಅವರನ್ನೇ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಿಕೊಳ್ಳಬಹುದು ಅಥವಾ ರಿಸರ್ವ್ ಬ್ಯಾಂಕು ನಿಗದಿಪಡಿಸಿದ ಅರ್ಹತೆಯುಳ್ಳ ಇತರ ಅಭ್ಯರ್ಥಿಗಳನ್ನು ನಿಯಮಾನುಸಾರ ನೇಮಕ ಮಾಡಿಕೊಳ್ಳಬಹುದು.

ಇ) ಸದರಿ ನಿಯಮವು ಅಪೆಕ್ಸ್ ಬ್ಯಾಂಕಿಗೂ ಕೂಡ ಅನ್ವಯವಾಗಿದ್ದು ದಿನಾಂಕ: 31.1.2011ರಂದು ನಡೆದ ಬ್ಯಾಂಕಿನ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ವ್ಯವಸ್ಥಾಪಕ ನಿರ್ದೇಶಕರಾದ ಐ.ಎ.ಎಸ್. ಅಧಿಕಾರಿಯನ್ನು ಬ್ಯಾಂಕಿನಿಂದ ಬಿಡುಗಡೆಗೊಳಿಸಲಾಗಿರುತ್ತದೆ. ಈ ಹುದ್ದೆಯನ್ನು ದಿನಾಂಕ: 31.3.2011 ರೊಳಗಾಗಿ ತುಂಬಲು ಸಹಕಾರ ಸಂಘಗಳ ನಿಬಂಧಕರು ಸೂಚಿಸಿರುತ್ತಾರೆ.

ಈ) ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕಿನಲ್ಲಿ ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರ ಹುದ್ದೆ ಖಾಲಿಯಿದ್ದು, ದಿನಾಂಕ: 31.3.2011 ರೊಳಗಾಗಿ ವ್ಯವಸ್ಥಾಪಕ ನಿರ್ದೇಶಕರ ಖಾಲಿ ಹುದ್ದೆಯನ್ನು ತುಂಬಲು ಸಹಕಾರ ಸಂಘಗಳ ನಿಬಂಧಕರು ತಿಳಿಸಿರುತ್ತಾರೆ.

ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಹಾಲಿ ಕೆಲಸ ನಿರ್ವಹಿಸುತ್ತಿರುವ 21 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳ ವೈಯಕ್ತಿಕ ವಿವರಗಳನ್ನು ಪರಿಶೀಲಿಸಲಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ (Fit & Proper Criteria) ಮಾನದಂಡಗಳನ್ನು ಚಿತ್ರದುರ್ಗ, ಉತ್ತರ ಕನ್ನಡ ಮತ್ತು ಬೀದರ್ ಜಿಲ್ಲಾ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮಾತ್ರ ಪೂರೈಸುತ್ತಾರೆಂದು ನಬಾರ್ಡ್ ತಿಳಿಸಿರುತ್ತದೆ. ಉಳಿದ ಎಲ್ಲಾ ಬ್ಯಾಂಕುಗಳು ಈ ಕೂಡಲೇ ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಮಾನದಂಡಗಳನ್ನು ಅನುಸರಿಸಿ ಹೊಸದಾಗಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ಅರ್ಹ ಅಭ್ಯರ್ಥಿಗಳನ್ನು ದಿನಾಂಕ: 31.3.2011ರೊಳಗೆ ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳಲು ಸಹಕಾರ ಸಂಘಗಳ ನಿಬಂಧಕರು ಸೂಚಿಸಿದ್ದಾರೆ.